O.S 94/2022

P.W.1

ಸಾಕ್ಷಿಯನ್ನು ದಿಃ 06-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಬಿ.ಎಸ್.ಪಿ ವಕೀಲರಿಂದ

ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ನನ್ನ ಅಣ್ಣನ ಹೆಸರು ದಾಖಲಾಗಿ ಸುಮಾರು 15 ವರ್ಷಗಳಾಗಿರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರ 3 ಎಕರೆ ಜಮೀನು ಮಾರಾಟ ಮಾಡಿದಾಗ ನನಗೆ ತಿಳಿದಿರುತ್ತದೆ. ನನ್ನ ತಂದೆಯವರು ಮರಣ ನಂತರ ನಾವು ಎಲ್ಲಾ ಸಹೋದರಿಯರು ಮತ್ತು ತಾಯಿ ಸೇರಿಕೊಂಡು ಕಬೂಲಿ ವರದಿ ನೀಡಿದ್ದಕ್ಕೆ ನನ್ನ ಸಹೋದರನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಸಾಲವನ್ನು ತಿರಿಸುವ ಸುವಾಗಿ ಸರ್ವೆ ನಂ.149 ನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದಿದ ನಂತರ ದಾವಾ ಆಸ್ತಿಗಳ ಸ್ವಾಧೀನವು ನನ್ನ ಸಹೋದರರ ಕಡೆ ಇರುತ್ತದೆ ಎಂದರೆ ಸರಿಯಲ್ಲ. ದಾವ ಆಸ್ತಿಗಳನ್ನು ಮಾರಾಟ ಮಾಡಲು ನಾನು ಮತ್ತು ನನ್ನ ಸಹೋದರಿಯರೆಲ್ಲರೂ ಎ.ಎಮ್.ಮಡಿವಾಳರ ನೋಟರಿ ಅವರ ಸಮ್ಮುಖದಲ್ಲಿ ನನ್ನ ಸಹೋದರನ ಪರವಾಗಿ ಮುಕ್ತಿಯಾರ ನಾಮೆಯನ್ನು ಬರೆದುಕೊಟ್ಟು ಈಗ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(2 ರಿಂದ 5 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-06-01-2026

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ